ನಾನು ಕಂಡ ವಿವೇಕಾನಂದ



ಡಾ. ಆರ್. ಬಾಲಸುಬ್ರಹ್ಮಣ್ಯಂ

# ಮಹಾನ್ ವ್ಯಕ್ತಿಗಳ ಸಮಾಗಮ

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಲವರ ಮೇಲೆ ಸ್ವಾಮಿ ವಿವೇಕಾನಂದರು ಸ್ಫೂರ್ತಿ ಬೀರಿದ್ದರೆಂಬುದು ಈಗ ಬಹುತೇಕರಿಗೆ ಗೊತ್ತು. ಸುಭಾಷ್‌ಚಂದ್ರ ಬೋಸ್ ಅವರಿರಲಿ, ರಾಜಗೋಪಾಲಾಚಾರಿ ಅಥವಾ ಮಹಾತ್ಮ ಗಾಂಧಿಯವರಿರಲಿ, ಸ್ವಾಮೀಜಿ ಹಾಗೂ ಅವರ ಕೃತಿಗಳು ಅವರೆಲ್ಲರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದವು. ಲೋಕಮಾನ್ಯ ಬಾಲ ಗಂಗಾಧರ ತಿಲಕರೊಂದಿಗೆ ಸ್ವಾಮಿ ವಿವೇಕಾನಂದರು ನಡೆಸಿದ ಭೇಟಿ ಈ ಇಬ್ಬರು ಮಹಾನ್ ವ್ಯಕ್ತಿಗಳ ಜೀವನದಲ್ಲಿ ಮತ್ತೊಂದು ಸ್ಮರಣೀಯ ಘಟನೆಯಾಗಿದೆ.

ಮಹಾರಾಷ್ಟ್ರ ಮೂಲದ ತಿಲಕರು ಮುಂಚೂಣಿ ಸ್ವಾತಂತ್ರ್ಯ ಹೋರಾಟಗಾರರೂ, ಅಪ್ಪಟ ರಾಷ್ಟ್ರಭಕ್ತರೂ ಹಾಗೂ ಉನ್ನತ ವ್ಯಕ್ತಿಯೂ ಆಗಿದ್ದರು. ರಾಷ್ಟ್ರ ಸಂಚಾರದಲ್ಲಿದ್ದ ವಿವೇಕಾನಂದರಿಗೆ 1892ರಲ್ಲಿ ಮುಂಬೈಗೆ (ಆಗ ಬಾಂಬೆ) ಆಗಮಿಸಿದ್ದಾಗ, ಪುಣೆಗೆ ಭೇಟಿ ನೀಡುವ ಮನಸ್ಸಾಯಿತು. ಸ್ವಾಮಿ ಅವರು ಮುಂಬೈ ಬಿಟ್ಟು ತೆರಳುವ ಹಂತದಲ್ಲಿದ್ದಾಗ, ರೈಲು ನಿಲ್ದಾಣದಲ್ಲಿ ಇದ್ದವರೊಬ್ಬರು ತಿಲಕರನ್ನು ಪರಿಚಯಿಸಿದರು. ತಿಲಕರು ಕೂಡ ಅದೇ ರೈಲಿನಲ್ಲಿ ವಿವೇಕಾನಂದರ ಸಹ ಪ್ರಯಾಣಿಕರಾಗಿ ಹೊರಟಿದ್ದರು.

ಮುಂದೆ, ತಿಲಕರು ಈ ಸಂದರ್ಭವನ್ನು ಮೆಲುಕು ಹಾಕಿ ಆ ಬಗ್ಗೆ ಹೀಗೆ ಬರೆದಿದ್ದಾರೆ– ‘1892ರ ಸುಮಾರಿನಲ್ಲಿ, ಅಂದರೆ ಷಿಕಾಗೊದಲ್ಲಿ ನಡೆದ ವಿಶ್ವ ಧಾರ್ಮಿಕ ಸಂಸತ್ ಸಮಾವೇಶಕ್ಕೆ ಮುನ್ನ, ನಾನು ಒಮ್ಮೆ ಬಾಂಬೆಯಿಂದ ಪುಣೆಗೆ ವಾಪಸಾಗುತ್ತಿದ್ದೆ. ವಿಕ್ಟೋರಿಯಾ ಟರ್ಮಿನಸ್ ರೈಲು ನಿಲ್ದಾಣದಲ್ಲಿ ಸನ್ಯಾಸಿಯೊಬ್ಬರು ನಾನಿದ್ದ ಬೋಗಿಗೆ ಬಂದರು. ಅವರನ್ನು ನೋಡಲೆಂದು ಕೆಲವು ಗುಜರಾತಿ ವ್ಯಕ್ತಿಗಳು ಆಗಮಿಸಿದ್ದರು. ಸನ್ಯಾಸಿಯನ್ನು ನನಗೆ ಪರಿಚಯಿಸಿದ ಆ ವ್ಯಕ್ತಿಗಳು, ನಂತರ ಪುಣೆಯಲ್ಲಿ ನನ್ನ ಮನೆಯಲ್ಲೇ ತಂಗುವಂತೆ ಸ್ವಾಮೀಜಿಯನ್ನು ಕೋರಿದರು. ನಾವು ಪುಣೆ ತಲುಪಿದೆವು. ಆ ಸನ್ಯಾಸಿ ನನ್ನೊಡನೆ ಎಂಟು– ಹತ್ತು ದಿನಗಳ ಕಾಲ ಇದ್ದರು. ನಾನು ಅವರ ಹೆಸರು ಏನೆಂದು ಕೇಳಿದಾಗ, ಅವರು ತಾನೊಬ್ಬ ಸನ್ಯಾಸಿ ಎಂದಷ್ಟೇ ಹೇಳಿದರು. ಅವರು ಅಲ್ಲಿದ್ದಾಗ ಯಾವೊಂದು ಸಾರ್ವಜನಿಕ ಭಾಷಣವನ್ನೂ ಮಾಡಲಿಲ್ಲ. ಮನೆಯಲ್ಲಿ ಪದೇಪದೇ ಅದ್ವೈತ ತತ್ವ ಸಿದ್ಧಾಂತ ಮತ್ತು ವೇದಾಂತದ ಬಗ್ಗೆ ಮಾತನಾಡುತ್ತಿದ್ದರು. ಸ್ವಾಮೀಜಿ ಸಮಾಜದೊಂದಿಗಿನ ಸಂಪರ್ಕವನ್ನು ಪ್ರಜ್ಞಾಪೂರ್ವಕವಾಗಿ ಕಡಿದುಕೊಳ್ಳಲು ಯತ್ನಿಸುತ್ತಿದ್ದುದು ಗೋಚರಿಸುತ್ತಿತ್ತು. ಆಗ ಅವರ ಬಳಿ ಒಂದು ದಮಡಿ ಕಾಸೂ ಇರಲಿಲ್ಲ. ಜಿಂಕೆಯ ಚರ್ಮದ ಒಂದು ಪುಟ್ಟ ನೆಲಹಾಸು, ಒಂದೋ ಎರಡೋ ಬಟ್ಟೆ, ಒಂದು ಕಮಂಡಲ ಇವಿಷ್ಟು ಮಾತ್ರ ಅವರ ಬಳಿ ಇದ್ದವು. ಅವರು ಬೇರೊಂದು ಊರಿಗೆ ಪ್ರಯಾಣ ಮಾಡಬೇಕೆಂದಾಗ, ಯಾರಾದರೊಬ್ಬರು ಟಿಕೆಟ್ ಸಿದ್ಧಪಡಿಸಿ ರೈಲು ನಿಲ್ದಾಣದಲ್ಲಿ ಅವರಿಗೆ ನೀಡುತ್ತಿದ್ದರು. ಆ ಸಂದರ್ಭದಲ್ಲಿ ನಾನು ಡೆಕ್ಕನ್ ಕ್ಲಬ್‌ನ ಸದಸ್ಯನಾಗಿದ್ದೆ. ಆ ಕ್ಲಬ್ ವಾರಕ್ಕೊಮ್ಮೆ ಸಭೆ ನಡೆಸುತ್ತಿತ್ತು. ಅಂತಹ ಸಭೆಯೊಂದರಲ್ಲಿ ಸ್ವಾಮೀಜಿ ಕೂಡ ನನ್ನೊಂದಿಗೆ ಇದ್ದರು. ಆ ಸಂಜೆ ಕಾಶಿನಾಥ್ ಗೋವಿಂದನಾಥ್ ಅವರು ತಾತ್ವಿಕ ವಿಷಯವೊಂದರ ಬಗ್ಗೆ ಅದ್ಭುತ ಉಪನ್ಯಾಸ ನೀಡಿದರು. ಉಳಿದಂತೆ, ಅಲ್ಲಿದ್ದವರ್‍ಯಾರೂ ಬೇರೇನನ್ನೂ ಮಾತನಾಡಲಿಲ್ಲ. ಆದರೆ ಸ್ವಾಮೀಜಿ ಎದ್ದು ನಿಂತು, ಈ ವಿಷಯದ ಮತ್ತೊಂದು ಮುಖದ ಕುರಿತು ಇಂಗ್ಲಿಷ್‌ನಲ್ಲಿ ಸುಲಲಿತವಾಗಿ ವಿಷಯ ಮಂಡಿಸಿದರು. ಆಗ ಅಲ್ಲಿ ನೆರೆದಿದ್ದವರೆಲ್ಲರಿಗೂ ಸ್ವಾಮೀಜಿ ಅವರ ಉನ್ನತ ಸಾಮರ್ಥ್ಯ ಏನೆಂಬುದು ನಿಚ್ಚಳವಾಯಿತು. ಇದಾದ ನಂತರ ಕೆಲವೇ ದಿನಗಳಲ್ಲಿ ಸ್ವಾಮೀಜಿ ಪುಣೆಯಿಂದ ಹೊರಟರು’.

ಡೆಕ್ಕನ್ ಕ್ಲಬ್‌ನಲ್ಲಿ ಹೀಗೆ ವಿಷಯ ಮಂಡನೆ ಮಾಡಿದ ನಂತರ ಸ್ವಾಮೀಜಿ ಅವರ ಜನಪ್ರಿಯತೆ ಹೆಚ್ಚಿ, ಅವರಿದ್ದೆಡೆಗೆ ಜನ ಮುಗಿಬೀಳುತ್ತಿದ್ದರು. ಹೀಗೆ ಸೇರುತ್ತಿದ್ದ ಜನರನ್ನು ಉದ್ದೇಶಿಸಿ ಅವರು ಗೀತೆ ಮತ್ತು ಉಪನಿಷತ್ ಕುರಿತು ಮಾತನಾಡುತ್ತಿದ್ದರು. ಆದರೆ ಅವರಿಗೆ ತಮ್ಮ ಹೆಸರೇನೆಂಬುದನ್ನು ಮಾತ್ರ ಹೇಳಿರಲಿಲ್ಲ. ತಮ್ಮನ್ನು ಭೇಟಿ ಮಾಡಲು ಹೆಚ್ಚೆಚ್ಚು ಜನ ಬರಲಾರಂಭಿಸಿದಾಗ, ತಾವು ಮರುದಿನ ಅಲ್ಲಿಂದ ತೆರಳುವುದಾಗಿ ಸ್ವಾಮೀಜಿ ತಿಲಕರಿಗೆ ತಿಳಿಸಿದರು. ಅದರಂತೆ, ಮರುದಿನ ಬೆಳಿಗ್ಗೆ ಮನೆಯಲ್ಲಿದ್ದವರು ಏಳುವುದಕ್ಕೂ ಮುನ್ನವೇ ಸ್ವಾಮೀಜಿ ಅಲ್ಲಿಂದ ಹೊರಟು ಹೋಗಿದ್ದರು.

ಈ ಅವಧಿಯಲ್ಲಿ ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಜೀವನ ಸಾಗಿಸಿದ್ದರು. ಅಂದರೆ, ಶಾಂತಿ– ಸಮಾಧಾನ ಕಂಡುಕೊಳ್ಳುವ ಸಲುವಾಗಿ ಬಾಹ್ಯ ಪ್ರಪಂಚಕ್ಕಿಂತ ಹೆಚ್ಚಾಗಿ ಆತ್ಮಾನುಸಂಧಾನದಲ್ಲಿ ತೊಡಗಿದ್ದರು. ಆ ಸಂದರ್ಭದಲ್ಲಿ ಅವರು ತಮ್ಮನ್ನು ಸಚ್ಚಿದಾನಂದ ಎಂಬ ಹೆಸರಿನಿಂದ ಕರೆದುಕೊಳ್ಳುತ್ತಿದ್ದರು.

ಸ್ವಾಮಿ ವಿವೇಕಾನಂದರನ್ನು ತಿಲಕರು ಮತ್ತೊಮ್ಮೆ ಭೇಟಿಯಾಗಿದ್ದರು. ಆ ವೇಳೆಗೆ ಸ್ವಾಮೀಜಿ ಹೆಸರುವಾಸಿಯಾಗಿದ್ದರ ಜತೆಗೆ, ರಾಮಕೃಷ್ಣ ಮಠವನ್ನು ಕೂಡ ಸ್ಥಾಪಿಸಿಯಾಗಿತ್ತು. 1901ರಲ್ಲಿ ಕೋಲ್ಕತ್ತದಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸಭೆಯಲ್ಲಿ ಪಾಲ್ಗೊಳ್ಳಲು ತೆರಳಿದ್ದಾಗ, ತಿಲಕರು ಸ್ವಾಮೀಜಿಯವರನ್ನು ಬೇಲೂರು ಮಠದಲ್ಲಿ ಭೇಟಿಯಾದರು. ಈ ಭೇಟಿ ವೇಳೆ, ಇಬ್ಬರು ಮಹಾನ್ ವ್ಯಕ್ತಿಗಳ ನಡುವೆ ಏನು ಸಂವಾದ ನಡೆಯಿತು ಎಂಬುದು ಎಲ್ಲೂ ದಾಖಲಾಗಿಲ್ಲ. ಆದರೆ, ಇವರ ಬೌದ್ಧಿಕ ವಿನಿಮಯ ಪರಸ್ಪರರ ಮೇಲೆ ಪ್ರಭಾವ ಬೀರಿ, ಇಬ್ಬರ ಚಿಂತನೆ, ಕೃತಿಗಳ ಮೇಲೂ ಪರಿಣಾಮ ಬೀರಿರುವುದರಲ್ಲಿ ಅನುಮಾನವಿಲ್ಲ.

ಈ ಇಬ್ಬರು ಮೇರು ವ್ಯಕ್ತಿಗಳ ಕೃತಿಗಳಲ್ಲೂ ‘ಪ್ರಾಯೋಗಿಕ ವೇದಾಂತ’ವು ಸಾಮಾನ್ಯ ವಿಷಯವಾಗಿರುವುದನ್ನು ನಾವು ಕಾಣಬಹುದು. ಅದರ ಜತೆಗೆ, ವಿಶೇಷವಾಗಿ ‘ಭಾರತೀಯ ರಾಷ್ಟ್ರ’ ಪರಿಕಲ್ಪನೆಗೆ ಸಂಬಂಧಿಸಿದಂತೆ ಇಬ್ಬರ ಚಿಂತನೆಗಳಲ್ಲಿದ್ದ ವ್ಯತ್ಯಾಸ ಏನೆಂಬುದು ಕೂಡ ಸ್ಪಷ್ಟವಾಗಿ ಕಾಣುತ್ತದೆ. ವಿವೇಕಾನಂದರು, ಸಮಗ್ರ ಭಾರತೀಯ ರಾಷ್ಟ್ರದ ಪರಿಕಲ್ಪನೆಗೆ ಇಂಬು ನೀಡಿದರು. ಆದರೆ ತಿಲಕರು ಇತರ ಧರ್ಮಗಳನ್ನು ಹೊರತುಪಡಿಸಿದ, ‘ಹಿಂದೂ ರಾಷ್ಟ್ರ’ದ ಪರಿಕಲ್ಪನೆಯ ಬಗ್ಗೆ ಗಮನ ಕೇಂದ್ರೀಕರಿಸಿದ್ದರು. ◆